**Crl Misc No. 3347/2024**
**PW-1.**

ದಿನಾಂಕ **26.12.2025** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರದಾರರ ಪರ ಃ ಶ್ರೀ ಆರ್.ಆರ್.ಆರ್ ವಕೀಲರಿಂದಃ

ನಾನು 5 ನೇ ತರಗತಿ ವರೆಗೆ ಓದಿದ್ದೆನೆ. ಕನ್ನಡ ಮಾಧ್ಯಮದಲ್ಲಿ ಓದಿದ್ದೇನೆ. ಎದುರುದಾರನ ಗ್ರಾಮವಾದ ಬಳವಡಗಿ ಪಕ್ಕದ ಕಂಚೋರ ಗ್ರಾಮದ ದೇವಸ್ಥಾನದಲ್ಲಿ ನನ್ನ ಮತ್ತು ಎದುರುದಾರನ ಮದುವೆ ಆಗಿರುತ್ತದೆ. ಮದುವೆಯಾದ ನಂತರ ಸುಮಾರು 10 ವರ್ಷಗಳ ವರೆಗೆ ನಾವು ಚೆನ್ನಾಗಿ ಇದ್ದೆವು. ಎದುರುದಾರನ ಬಲಗಣ್ಣು ಕುರುಡಾಗಿದ್ದು, ಆತ ನೋಡಲು ಚೆನ್ನಾಗಿ ಇರುವುದಿಲ್ಲ ಎಂದರೆ ಸಾಕ್ಷಿಯು ಮದುವೆಯಾದಾಗ ಚೆನ್ನಾಗಿಯೇ ಇದ್ದರು ಎಂದು ನುಡಿಯುತ್ತಾರೆ. ಆತ ಮದುವೆಯಾದಾಗಲೂ ಕುರುಡನಾಗಿದ್ದನು ಎಂದರೆ ಸರಿಯಲ್ಲ. ನಾನು ಯಾದಗಿರಿಯವಳಾಗಿದ್ದು, ಎದುರುದಾರ ಬಳವಡಗಿ ಗ್ರಾಮದವನಾಗಿರುತ್ತಾನೆ ಎಂದರೆ ಸರಿ. ಬಳವಡಗಿಯಿಂದ ಕೊಂಚೂರು ಗ್ರಾಮ ಕೇವಲ 2 ಕಿಮೀ ದೂರ ಇದೆ ಎಂದರೆ ಸರಿ. ಬಳವಡಗಿ, ಕಂಚೂರು ಹಾಗೂ ಹಲಕಟ್ಟಾ ಗ್ರಾಮದವರು ಕಂಚೂರು ಗ್ರಾಮದ ಹನುಮಾನ್ ದೇವಸ್ಥಾನಕ್ಕೆ ತುಂಬಾ ನಡೆದುಕೊಳ್ಳುತ್ತಾರೆ ಎಂದರೆ ಸರಿ. ಆದ್ದರಿಂದ ಎದುರುದಾರ ಸದರಿ ದೇವಸ್ಥಾನದಲ್ಲಿ ನನ್ನೊಂದಿಗೆ ಮದುವೆ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಮದುವೆ ಖರ್ಚನ್ನು ಎದುರುದಾರನ ಕುಟುಂಬದವರೇ ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತವರು ಮನೆಯವರು ರೂ.1 ಲಕ್ಷ ಹಣ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ತವರು ಮನೆಯವರು ರೂ.1 ಲಕ್ಷ ಹಣ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಎದುರುದಾರನಿಗೆ 05 ತೊಲೆಯ ಯಾವ ಆಭರಣ ನೀಡಿದ್ದೀರಿ ಎಂಬ ಬಗ್ಗೆ ಅರ್ಜಿ ಹಾಗೂ ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು 05 ತೊಲೆಯ ಉಂಗುರ ಕೊಟ್ಟಿದ್ದೆವು ಎಂದು ನುಡಿಯುತ್ತಾರೆ. ಸದರಿ ಚಿನ್ನಾಭರಣಕ್ಕೆ ಸಂಬಂಧಿಸಿದ ರಸೀದಿ ಈಗ ನನ್ನ ಹತ್ತಿರ ಇರುವುದಿಲ್ಲ. ಎದುರುದಾರನ ಕುಟುಂಬದವರು ವರದಕ್ಷಣೆ ಕೇಳಿದ್ದರಿಂದ ರೂ.1 ಲಕ್ಷ ನಗದು ಹಣ ಕೊಟ್ಟಿದ್ದೆವು. ಎದುರುದಾರನ ಕುಟುಂಬದವರು ಆ ರೀತಿ ವರದಕ್ಷಣೆ ಕೇಳಿಲ್ಲ ಹಾಗೂ ನಾವು ವರದಕ್ಷಣೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ಎದುರುದಾರ ನನಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿದ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿಲ್ಲ. ಎದುರುದಾರ ಕುಡಿದು ಬಂದು ನನಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದನು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರ ನನಗೆ ಹುಷಾರಿಲ್ಲದ ಸಮಯದಲ್ಲಿ ಚಿಕಿತ್ಸೆ ಕೊಡಿಸಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗಂಡು ಮಗು ಜನಿಸಿಲ್ಲ ಎಂಬ ಕಾರಣಕ್ಕಾಗಿ ವಿವಾಹ ವಿಚ್ಚೇದನೆ ನೀಡುವಂತೆ ಎದುರುದಾರ ಕಿರುಕುಳ ನೀಡಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಎದುರುದಾರನ ತಾಯಿಗೆ ಸುಮಾರು 60 ವರ್ಷ ವಯಸ್ಸಾಗಿದೆ. ನಾನು, ಎದುರುದಾರ ಹಾಗೂ ಆತನ ತಾಯಿ ಪ್ರತ್ಯೇಕ ಮನೆಯಲ್ಲಿ ವಾಸವಾಗಿದ್ದೆವು ಎಂದರೆ ಸರಿ. 2 ಮತ್ತು 3 ನೇ ಅರ್ಜಿದಾರರು ಈಗ ಸರಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ. ಸರಕಾರಿ ಶಾಲೆಯಲ್ಲಿ ಉಚಿತ ಶಿಕ್ಷಣ ನೀಡುತ್ತಾರೆ ಎಂದರೆ ಸರಿಯಲ್ಲ. ಸರಕಾರಿ ಶಾಲೆಯಲ್ಲಿ ಮಕ್ಕಳಿಗೆ ಶಾಲಾ ಸಮವಸ್ತ್ರ ಹಾಗೂ ಪುಸ್ತಕಗಳನ್ನು ಸಹ ಉಚಿತವಾಗಿ ಕೊಡುತ್ತಾರೆ ಎಂದರೆ ಸರಿ. ನನ್ನ ಮಾವ ಈಗ 03 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಆತ ತೀರಿಕೊಂಡ ಸುದ್ದಿ ನಮಗೆ ತಿಳಿದಿರಲಿಲ್ಲ. ಎದುರುದಾರ ಕರೆ ಮಾಡಿ ಸುದ್ದಿ ತಿಳಿಸಿದಾಗ ನೀವು ಮಕ್ಕಳನ್ನು ಮಾತ್ರ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿ ಆತ ಬೆಂಗಳೂರಿನಲ್ಲಿ ಇರುವ ನನ್ನ ಅಣ್ಣನಿಗೆ ತಿಳಿಸಿದ್ದರು ಹಾಗಾಗಿ ನನ್ನ ಅಣ್ಣ ಮಕ್ಕಳನ್ನು ಕೆರದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ನನ್ನ ಅಣ್ಣ ನನಗೆ ಕರೆ ಮಾಡಿ ಸದರಿ ಸಾವಿನ ಸುದ್ದಿಯನ್ನು ತಿಳಿಸಿದ್ದರು ಎಂದರೆ ಸರಿಯಲ್ಲ. ಸಾವಿನ ಸುದ್ದಿ ತಿಳಿದರೂ ಸಹ ನಾನು ಉದ್ದೇಶ ಪೂರ್ವಕವಾಗಿ ಅಂತ್ಯಸಂಸ್ಕಾರಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

5. ನೀವು ಎರಡುವರೆ - ಮೂರು ವರ್ಷಗಳ ವರೆಗೆ ನಿಮ್ಮ ತಾಯಿಯೊಂದಿಗೂ ಇರದೇ ಕಾಣೆಯಾಗಿದ್ದೀರಿ ಎಂದರೆ ಸಾಕ್ಷಿಯು ಮೈಸೂರಿನಲ್ಲಿ ನನ್ನ ಅಣ್ಣನೊಂದಿಗೆ ಇದ್ದೆನು ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನಲ್ಲಿ ಇದ್ದಾಗ 2-3 ಸಲ ಎದುರುದಾರ ನನ್ನನ್ನು ಕರೆಯಲು ಬಂದಿದ್ದನು ಎಂದರೆ ಸರಿಯಲ್ಲ, ನಾನು ಯಾದಗಿರಿಯಲ್ಲಿ ಇದ್ದಾಗಲೂ ಸಹ ಎದುರುದಾರ ನನ್ನನ್ನು ಕರೆಯಲು ಬಂದಿದ್ದನು ಎಂದರೆ ಸರಿಯಲ್ಲ. ಹಿರಿಯರ ಸಮಕ್ಷಮ 2-3 ಸಲ ಪಂಚಾಯಿತಿ ಸಹ ಆಗಿದೆ ಎಂದರೆ ಸಾಕ್ಷಿ ಒಂದು ಸಲ ಮಾತ್ರ ಆಗಿದೆ ಎಂದು ನುಡಿಯುತ್ತಾರೆ. ಆಗ ಹಿರಿಯರು ಇಬ್ಬರಿಗೂ

ಬುದ್ದಿವಾದ ಹೇಳಿದ್ದರು ಎಂದರೆ ಸರಿ. ಆದರೂ ನೀವು ಗಂಡನ ಮನೆಗೆ ಹೋಗಿಲ್ಲ ಎಂದರೆ ಸಾಕ್ಷಿ ಹೋಗಿಲ್ಲ ಎಂದು ನುಡಿಯುತ್ತಾರೆ. ನಂತರ ಎದುರುದಾರ ನಿಮಗೆ ವೈವಾಹಿಕ ಜೀವನ ನಡೆಸುವಂತೆ ವಕೀಲರ ಮೂಲಕ ನೋಟಿಸ್ ಕಳಹಿಸಿದ್ದರು ಎಂದರೆ ಸಾಕ್ಷಿ ವಿವಾಹ ವಿಚ್ಛೇದನೆ ನೀಡುವಂತೆ ನೋಟಿಸ್ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ನಾನು ಗಂಡನ ಮನೆಗೆ ಹೋಗದ ಕಾರಣ ಆ ನಂತರ ಎದುರುದಾರ ಚಿತ್ತಾಪೂರದ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಎಂ.ಸಿ ನಂ.38/2024 ರಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿ. ಎದುರುದಾರ ಈಗಲೂ ನಿಮ್ಮ ಹಾಗೂ ಮಕ್ಕಳ ಮೇಲೆ ಪ್ರೀತಿ ಹೊಂದಿದ್ದು ನಿಮ್ಮನ್ನು ಕರೆದುಕೊಂಡು ಹೋಗಲು ತಯಾರಿದ್ದಾನೆ ಎಂದರೆ ಸಾಕ್ಷಿಯು ಸಾಕ್ಷಿ ನಾನು ಹೋಗುವುದಿಲ್ಲ ಎಂದು ನುಡಿಯುತ್ತಾರೆ.

6. ಎದುರುದಾರ ಸೇರಿದಂತೆ ಅವರು ಇಬ್ಬರು ಸಹೋದರರು ಇದ್ದಾರೆ. ಮಹಾದೇವಿ ಹಾಗೂ ಶರಣಪ್ಪ ರವರು ನನ್ನ ಅತ್ತೆ-ಮಾವಂದಿರು ಆಗಿರುತ್ತಾರೆ. ಪಹಣಿಗಳು ನನ್ನ ಅತ್ತೆಯ ಹೆಸರಿನಲ್ಲಿ ಇದ್ದು, ಎದುರುದಾರ ಹಾಗೂ ಆತನ ಸಹೋದರನ ನಡುವೆ ಈ ವರೆಗೆ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ಜಮೀನು ಬಂಜರು ಭೂಮಿಯಾಗಿದ್ದು ಅಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ.

7. ನಾನು ಬೆಂಗಳೂರು-ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ನನ್ನ ಅಣ್ಣನೊಂದಿಗೆ ವಾಸವಾಗಿದ್ದು, ಪ್ರತೀ ದಿನ ಕೂಲಿ ಕೆಲಸ ಮಾಡಿ ತಿಂಗಳಿಗೆ ರೂ.15-20 ಸಾವಿರ ಹಣ ಸಂಪಾದಿಸುತ್ತಿದ್ದೆನು ಎಂದರೆ ಸರಿಯಲ್ಲ. ಎದುರುದಾರ ಪ್ರತೀ ದಿನ ಕೆಲಸಕ್ಕೆ ಹೋಗುವುದಿಲ್ಲ ಹಾಗೂ ತಿಂಗಳಿಗೆ ರೂ.20-30 ಸಾವಿರ ಸಂಪಾದಿಸುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನಿಂದ ಎದುರುದಾರ ರೂ.10 ಲಕ್ಷ ಆದಾಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿದ ರೀತಿ ಜೀವನಾಂಶವನ್ನು ನೀಡುವ ಆರ್ಥಿಕ ಸಾಮಾರ್ಥ್ಯ ಎದುರುದಾರನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನ ಒಂದು ಕಣ್ಣು ಕುರುಡಾಗಿದ್ದು ಆತ ಈಗ ಯಾವುದೇ ಆದಾಯ ಹೊಂದಿರುವುದಿಲ್ಲ ಎಂದರೆ ಸಾಕ್ಷಿ ಒಂದು ಕಣ್ಣು ಕುರುಡಾಗಿರುವುದು ನಿಜ ಆದರೆ ಆತ ದುಡಿಯುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರ ದುಡಿಯುತ್ತಾನೆ ಎಂದು ಸುಳ್ಳು ಸಾಕ್ಷ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಎದುರುದಾರನ ಕುಟುಂಬದವರು ನನಗೆ ಚಿನ್ನದ ಕಿವಿಯೋಲೆ, ತಾಳಿ ಸರ, ಸರ ಹಾಗೂ ಬೆಳ್ಳಿ ಕಾಲುಂಗುರ ಮತ್ತು 11 ಒಳ್ಳೆಯ ಸೀರೆಗಳನ್ನು ನೀಡಿ ರೂ.2,50,000/- ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ದಾಖಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು,ಯಾದಗಿರಿ.